# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 789(927) (ವರ್ಗಾವಣೆಗೊಂಡ ಪ್ರಶ್ನೆ) |
| ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 21.07.2023 |
| ಉತ್ತರಿಸುವವರು | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿರಗುಪ್ಪ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸಿದ್ದರೂ ಸಹ ಅವುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇವುಗಳನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡ ತೀರ್ಮಾನಗಳೇನು; (ಮಾಹಿತಿ ನೀಡುವುದು). | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸುಸ್ಥಿತಿಯಲ್ಲಿಡುವುದು ಘಟಕಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ವಹಿಸಿರುವ ಸಂಸ್ಥೆಗಳು / ಗ್ರಾಮ ಪಂಚಾಯಿತಿಗಳದ್ದಾಗಿರುವುದರಿಂದ ಘಟಕಗಳ ದುರಸ್ತಿ ಕಾರ್ಯವನ್ನು ನಿರ್ವಹಿಸುವ ಹೊಣೆಯನ್ನು ಟೆಂಡರ್ ಕರಾರಿನಂತೆ ಕಾರ್ಯಾಚರಣೆ ಮತ್ತು ನಿರ್ವಹಣೆ ವಹಿಸಿರುವ ಗುತ್ತಿಗೆದಾರರು / ಗ್ರಾಮ ಪಂಚಾಯಿತಿಗಳಿಂದ ಕೈಗೊಳ್ಳಲಾಗುತ್ತಿದೆ.<br>ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ, ಸಿರಗುಪ್ಪ ನಗರಸಭೆ ವ್ಯಾಪ್ತಿಯಲ್ಲಿ 6 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಾನ್ಯ ಸ್ಥಳೀಯ ಶಾಸಕರ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ, ಕಲಬುರಗಿ ಇವರ ಅನುದಾನದ ಅಡಿಯಲ್ಲಿ 2017-18ನೇ ಸಾಲಿನ ಕ್ರಿಯಾ ಯೋಜನೆ ಮಂಜೂರಾಗಿದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆರ್.ಡಬ್ಲ್ಯೂ.ಎಸ್. ಬಳ್ಳಾರಿ ಇವರಿಗೆ ವಹಿಸಲಾಗಿರುತ್ತದೆ. ಸದರಿ 6 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ಆರ್.ಡಬ್ಲ್ಯೂ.ಎಸ್. ಬಳ್ಳಾರಿ ಇಲಾಖಾ ವತಿಯಿಂದ ಕರೆಯಲಾಗಿದ್ದು, ಕಾಮಗಾರಿಗಳ ಆದೇಶಗಳು ಆರ್.ಡಬ್ಲ್ಯೂ.ಎಸ್. ಬಳ್ಳಾರಿ ಇವರಿಂದ ಜಾರಿಯಾಗಿದ್ದು, ಸದರಿ ಕಾಮಗಾರಿಗಳ ಸಂಪೂರ್ಣ ಅನುಷ್ಠಾನ ಪ್ರಕ್ರಿಯೆಯನ್ನು ಆರ್.ಡಬ್ಲ್ಯೂ.ಎಸ್. ಬಳ್ಳಾರಿ ಇಲಾಖೆಯವರಿಂದ ನಿರ್ವಹಿಸಲಾಗಿರುತ್ತದೆ. ಸದರಿ ಕಾಮಗಾರಿಗಳು ಅಪೂರ್ಣವಾಗಿರುವುದರಿಂದ ಆರ್ .ಡಬ್ಲ್ಯೂ.ಎಸ್. ಇಲಾಖೆ ಬಳ್ಳಾರಿ ರವರು ಸದರಿ 6 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಗರಸಭೆಗೆ ಹಸ್ತಾಂತರಿಸಿರುವುದಿಲ್ಲ. |
| ಆ) | ಸಿರಗುಪ್ಪ ತಾಲ್ಲೂಕಿನ ಕರೂರು, ಹಳೆಕೋಟೆ, ಸಿರಗುಪ್ಪ ನಗರ, ತಕ್ಕಲಕೋಟೆ ಪಟ್ಟಣ ಮತ್ತು ಇತರೆ ಗ್ರಾಮಗಳಲ್ಲಿ ಆರ್‌ಓ ಪ್ಲಾಂಟ್‌ಗಳ ಗಾಜನ್ನು ಹೊಡೆದು ಸಾಮಾಗ್ರಿಗಳನ್ನು ಕಳವು ಮಾಡಿರುವುದು ನಿಜವೇ; ಇವುಗಳನ್ನು ಸರಿಪಡಿಸಲು ಮತ್ತು ಸಾಮಾಗ್ರಿಗಳನ್ನು ಕಳವು ಮಾಡಿರುವುದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ಮಾಹಿತಿ ನೀಡುವುದು). | ಸಿರಗುಪ್ಪ ತಾಲ್ಲೂಕಿನ ಕರೂರು, ಹಳೇಕೋಟೆ ಮತ್ತು ಇತರೆ ಗ್ರಾಮಗಳಲ್ಲಿ ಆರ್.ಓ ಪ್ಲಾಂಟ್‌ಗಳ ಗಾಜನ್ನು ಒಡೆದು ಸಾಮಾಗ್ರಿಗಳನ್ನು ಕಳವು ಮಾಡಿರುವುದು ಇಲಾಖೆಯಿಂದ ಗಮನಿಸಲಾಗಿ ಟೆಂಡರ್ ಕರಾರಿನಂತೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ಸರಿಪಡಿಸಲು ಸೂಚನೆ ನೀಡಲಾಗಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ.<br>ಸಿರಗುಪ್ಪ ನಗರಸಭೆ ವ್ಯಾಪ್ತಿಯಲ್ಲಿನ ಸದರಿ 06 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಬಾಗ, ಬಳ್ಳಾರಿ ರವರು ನಿರ್ವಹಿಸುತ್ತಿದ್ದು, ಸದರಿ 06 ಆರ್.ಓ ಪ್ಲಾಂಟ್ |

| | | |
|---|---|---|
| | | ಘಟಕಗಳ ಪೈಕಿ 05 ಆರ್.ಓ ಪ್ಲಾಂಟ್ ಘಟಕಗಳ ಗಾಜುಗಳು ಹೊಡೆದು ಹೋಗಿದ್ದು, ಸಾಮಾಗ್ರಿಗಳು ಇರುವುದಿಲ್ಲ. ಉಳಿದ 01 ಆರ್.ಓ ಪ್ಲಾಂಟ್‌ನಲ್ಲಿ ಗಾಜುಗಳು ಒಡೆದಿರುವುದಿಲ್ಲ ಹಾಗೂ ಸಾಮಾಗ್ರಿಗಳು ಇದ್ದು, ಕಾರ್ಯ ನಿರ್ವಹಿಸುತ್ತಿರುವುದಿಲ್ಲ.<br><br>ತೆಕ್ಕಲಕೋಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 09 ಆರ್.ಓ ಪ್ಲಾಂಟ್‌ಗಳಿದ್ದು, 04 ಆರ್.ಓ ಪ್ಲಾಂಟ್‌ಗಳನ್ನು ಪಟ್ಟಣ ಪಂಚಾಯಿತಿಯ ವತಿಯಿಂದ ನಿರ್ಮಿಸಲಾಗಿದ್ದು, ಸುಸ್ಥಿತಿಯಲ್ಲಿವೆ.<br><br>• 01 ಆರ್.ಓ ಪ್ಲಾಂಟ್‌ನ್ನು ಕಿಯೋನಿಕ್ಸ್ ವತಿಯಿಂದ ನಿರ್ಮಿಸಿದ್ದು ಸುಸ್ಥಿತಿಯಲ್ಲಿದೆ.<br>• 01 ಆರ್.ಓ ಪ್ಲಾಂಟ್ ಕೆ.ಆರ್.ಐ.ಡಿ.ಎಲ್ ವತಿಯಿಂದ ನಿರ್ಮಿಸಲಾಗುತ್ತಿದ್ದು ಸುಸ್ಥಿತಿಯಲ್ಲಿರುತ್ತದೆ.<br>• 03 ಆರ್.ಓ ಪ್ಲಾಂಟ್ ಆರ್.ಡಬ್ಲ್ಯೂ.ಎಸ್ ವತಿಯಿಂದ ನಿರ್ವಹಿಸಲಾಗುತ್ತಿದ್ದು, 01 ಸುಸ್ಥಿತಿಯಲ್ಲಿದೆ.<br>• 02 ಆರ್.ಓ ಪ್ಲಾಂಟ್ ಚಾಲನೆಯಲ್ಲಿರುವುದಿಲ್ಲ.<br><br>ತೆಕ್ಕಲಕೋಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಆರ್.ಓ ಪ್ಲಾಂಟ್‌ಗಳ ಗಾಜನ್ನು ಒಡೆದು ಸಾಮಗ್ರಿಗಳನ್ನು ಕಳವು ಮಾಡಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಇ) | ಜಿಲ್ಲೆಯ ಹಲವು ಕಡೆಗಳಲ್ಲಿ ಖಾಸಗಿಯಾಗಿ ಹೆಚ್ಚಿನ ದರಕ್ಕೆ ನೀರನ್ನು ಮಾರಾಟ ಮಾಡುವ ಖಾಸಗಿಯವರಿಂದ ಉದ್ದೇಶ ಪೂರ್ವಕವಾಗಿ ಈ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮುಚ್ಚಿಸುತ್ತಿರವು ಆರೋಪವಿದ್ದು, ಇದಕ್ಕೆ ಸರ್ಕಾರ ಕೈಗೊಂಡ ಕಠಿಣ ಕ್ರಮಗಳೇನು? (ವಿವರ ನೀಡುವುದು). | ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ. |

**ಇ ಸಂಖ್ಯೆ:ನಅಇ 125 ಜಿಇಎಲ್ 2023**

(ರಹೀಂ ಖಾನ್)
ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು